KAMD400005602023

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಮಳವಳ್ಳಿ**

ಉಪಸ್ಥಿತರುಃ ***ಮಹೇಂದ್ರ ಎಂ., ಬಿ.ಎ. ಎಲ್.ಎಲ್.ಬಿ.***
***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು***
***ಜೆ.ಎಂ.ಎಫ್.ಸಿ., ಮಳವಳ್ಳಿ.***

**ದಿನಾಂಕಃ 10 ನೇ ಆಗಸ್ಟ್ 2026 ನೇ ಇಸವಿ**

**ಸಿ.ಸಿ. ಸಂಖ್ಯೆಃ 82/2023**

**ಫಿರ್ಯಾದಿದಾರ** : ಸರ್ಕಾರದ ಪರವಾಗಿ
**ಹಲಗೂರು ಪೊಲೀಸ್ ಠಾಣೆ.**

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**---** ವಿರುದ್ಧ **---**

**ಆರೋಪಿತರು** : **1. ಇರ್ಫಾನ್ ಖಾನ್**
ಬಿನ್ ಲೇಟ್ ಖಲಂದಾರ್ ಖಾನ್,
**ವಯಸ್ಸು** ಃ 32 ವರ್ಷ,
**ವಾಸಃ** ನೀಲಕಂಠೇಶ್ವರ ಶಾಲೆ,
ಮೇಗಳ ಬೀದಿ, ಸರ್ಕಾರಿ ಆಸ್ಪತ್ರೆ ಹತ್ತಿರ,
ಕನಕಪುರ ಟೌನ್, ರಾಮನಗರ ಜಿಲ್ಲೆ.

**2. ಮನು.ಎನ್ ಬಿನ್ ಲೇಟ್ ನಾಗಣ್ಣ,**
**ವಯಸ್ಸು** ಃ 29 ವರ್ಷ,
**ವಾಸಃ** ನಂ.85, ಶಿವಪುರ ಗ್ರಾಮ,
ಬಸರಾಳು ಹೋಬಳಿ, ಮಂಡ್ಯ.
**ಹಾಲಿ ವಾಸಃ** ನಂ.71, ಭೈರವೇಶ್ವರ ನಗರ,
ಲಗ್ಗೆರೆ, ಬೆಂಗಳೂರು ಸಿಟಿ.

**(ಪ್ರತಿನಿಧಿಸುವವರು ಶ್ರೀ. ಪಿ.ಎನ್.ಎಂ., ವಕೀಲರು)**

| | |
|---|---|
| ಕೃತ್ಯ ನಡೆದ ದಿನಾಂಕ | 16.06.2023 |
| ಪ್ರಾವಿಧಾನಗಳು | ಭಾ.ದಂ.ಸಂ.ಕಲಂ. 279 ಮತ್ತು 304(ಎ), ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187, 3 ಸಹವಾಚಕ 181, 5 ಸಹವಾಚಕ 180 ಮತ್ತು 146 ಸಹವಾಚಕ 196. |
| ಪ್ರಥಮ ವರ್ತಮಾನ ನೀಡಿದವರ ಹೆಸರು | ಶ್ರೀ ಶಿವಪ್ಪ.ಎಂ |
| ದೋಷಾರೋಪಣಾ ಪಟ್ಟಿ ಸಲ್ಲಿಸಿದ ದಿನಾಂಕ | 28.07.2023 |
| ಸಾಕ್ಷ್ಯ ವಿಚಾರಣೆ ಪ್ರಾರಂಭವಾದ ದಿನಾಂಕ | 18.03.2026 |
| ತೀರ್ಪು ಉಚ್ಚರಿಸಿದ ದಿನಾಂಕ | 10.08.2026 |
| ಅಂತಿಮ ಆದೇಶ | 1 ಮತ್ತು 2ನೇ ಆರೋಪಿತರು ದೋಷಿಗಳೆಂದು ತೀರ್ಮಾನ |

**(ಮಹೇಂದ್ರ ಎಂ.)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಮಳವಳ್ಳಿ.**

## **::ತೀರ್ಪು::**

ಹಲಗೂರು ಪೊಲೀಸ್ ಠಾಣೆಯ ಆರಕ್ಷಕ ವೃತ್ತ ನಿರೀಕ್ಷಕರು, ಆರೋಪಿತರ ವಿರುದ್ಧ **ಭಾ.ದಂ.ಸಂ.ಕಲಂ. 279 ಮತ್ತು 304(ಎ), ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187, 3 ಸಹವಾಚಕ 181, 5 ಸಹವಾಚಕ 180 ಮತ್ತು 146 ಸಹವಾಚಕ 196** ರಡಿಯಲ್ಲಿ ಅಪರಾಧ ಎಸಗಿರುತ್ತಾರೆಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

## 2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಃ

ದಿನಾಂಕಃ 16.06.2023 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಹಲಗೂರು ಪೊಲೀಸ್ ಠಾಣಾ ವ್ಯಾಪ್ತಿಯ ದಳವಾಯಿಕೋಡಿಹಳ್ಳಿ ಗ್ರಾಮದ ಬಸ್ ನಿಲ್ದಾಣದ ಸರ್ಕಲ್ ಬಳಿ ಇರುವ ತೇಜ ಮೆಡಿಕಲ್ ಸ್ಟೋರ್ ಮುಂದೆ ಹಾದು ಹೋಗಿರುವ ಕನಕಪುರ-ಮಳವಳ್ಳಿ ಎನ್‌ಹೆಚ್-209 ಹೆದ್ದಾರಿ ರಸ್ತೆಯನ್ನು ಪಾದಚಾರಿ ಮರಿಲಿಂಗಯ್ಯ ರವರು ಮನೆ ಕಡೆಗೆ ಹೋಗಲು ಮಳವಳ್ಳಿ-ಕನಕಪುರ ಹೆದ್ದಾರಿ ಪಥವನ್ನು ದಾಟಿ ನಂತರ ಕನಕಪುರ ಕಡೆಯಿಂದ ಮಳವಳ್ಳಿ ಕಡೆಗೆ ಬರುವ ಹೆದ್ದಾರಿ ಪಥವನ್ನು ನಡೆದುಕೊಂಡು ದಾಟುತ್ತಿದ್ದಾಗ, 1 ನೇ ಆರೋಪಿಯು ಚಾಲನಾ ಪರವಾನಿಗೆ ಇಲ್ಲದೇ 2 ನೇ ಆರೋಪಿಯ ಬಾಬ್ತು ಇನ್ಸೂರೆನ್ಸ್ ಇಲ್ಲದ ಕೆಎ-02-ಎಹೆಚ್-2209 ನಂಬರಿನ ಅಶೋಕ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನವನ್ನು ಕನಕಪುರ ಕಡೆಯಿಂದ ಮಳವಳ್ಳಿ ಕಡೆಗಾದಂತೆ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ದಾಟುತ್ತಿದ್ದ ಮರಿಲಿಂಗಯ್ಯ ರವರಿಗೆ ಡಿಕ್ಕಿ ಪಡಿಸಿದ ಪರಿಣಾಮವಾಗಿ ಮರಿಲಿಂಗಯ್ಯ ರವರ ತಲೆಗೆ ಬಲಕಾಲಿನ ಪಾದದ ಬಳಿ, ಎಡಕಾಲಿನ ಮಂಡಿಯ ಬಳಿ ಮತ್ತು ಮೂಗಿನ ಬಳಿ ತೀವ್ರ ಸ್ವರೂಪದ ಪೆಟ್ಟಾಗಿದ್ದು, ಚಿಕಿತ್ಸೆಗೆಂದು ಹಲಗೂರು ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿ ನಂತರ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿ ಮೃತರಾಗಿರುವ ಬಗ್ಗೆ ಅನುಮಾನ ಬಂದು ನಂತರ ವಾಪಸ್ ಮಂಡ್ಯ ಜಿಲ್ಲಾಸ್ಪತ್ರೆಗೆ ದಿನಾಂಕ 17.06.2023 ರಂದು ಬೆಳಗಿನ ಜಾವ 2.05 ಗಂಟೆ ಸಮಯದಲ್ಲಿ ಕರೆದುಕೊಂಡು ಬಂದು ವೈದ್ಯರ ಬಳಿ ತೋರಿಸಿದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. 1 ನೇ ಆರೋಪಿಯು ಗಾಯಾಳುವನ್ನು ಉಪಚರಿಸದೆ ಮತ್ತು ಅಪಘಾತದ ಬಗ್ಗೆ ಹತ್ತಿರದ ಪೋಲೀಸ್ ಠಾಣೆಗೆ ತಿಳಿಸದೆ ಪರಾರಿಯಾಗಿರುತ್ತಾರೆ. 2 ನೇ ಆರೋಪಿಯು ತನ್ನ ಬಾಬ್ತು ಗೂಡ್ಸ್

ವಾಹನವನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇಲ್ಲದ 1 ನೇ ಆರೋಪಿಗೆ ನೀಡಿರುತ್ತಾರೆ ಎಂಬುದು ಅಭಿಯೋಜನೆ ಪ್ರಕರಣದ ಸಾರಾಂಶವಾಗಿರುತ್ತದೆ.

3. ಪ್ರಾಸಾ7 ರವರು ಪ್ರಾಸಾ1 ರವರು ದಿನಾಂಕ 17.06.2023 ರಂದು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ಹೆ ಸಂಖ್ಯೆ:87/2023 ರಂತೆ ಆರೋಪಿತರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ. ಪ್ರಾಸಾ5 ರವರು ಪ್ರಕರಣದ ತನಿಖೆ ಮುಕ್ತಾಯಗೊಳಿಸಿ ಈ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ಈ ನ್ಯಾಯಾಲಯವು ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಿ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ **ಕಲಂ. 279 ಮತ್ತು 304(ಎ), ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187, 3 ಸಹವಾಚಕ 181, 5 ಸಹವಾಚಕ 180 ಮತ್ತು 146 ಸಹವಾಚಕ 196** ರಡಿಯಲ್ಲಿ ಸಂಜ್ಞೆ ತೆಗೆದುಕೊಂಡಿರುತ್ತದೆ.

5. ಈ ನ್ಯಾಯಾಲಯವು ಆರೋಪಿತರಿಗೆ ನ್ಯಾಯಾಲಯಕ್ಕೆ ಹಾಜರಾಗಲು ಸಮನ್ಸ್ ಜಾರಿ ಮಾಡಲು ಆದೇಶಿಸಿದ್ದು, ಅದರಂತೆ ಆರೋಪಿತರಿಗೆ ಸಮನ್ಸ್ ಜಾರಿಯಾಗಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಆರೋಪಿತರು ನ್ಯಾಯಾಲಯಕ್ಕೆ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಪ್ರಕಾರ ದೋಷಾರೋಪಣ ಪಟ್ಟಿಯ ನಕಲನ್ನು ಆರೋಪಿತರಿಗೆ ಪೂರೈಸಿರುತ್ತದೆ. ಆರೋಪಿತರ ವಿರುದ್ಧ ಆರೋಪಣೆ ರಚಿಸಿ ಓದಿ ಹೇಳಲಾಗಿ ಆರೋಪಿತರು ತಾವು ತಪ್ಪು ಮಾಡಿರುವುದಿಲ್ಲವೆಂದು, ವಿಚಾರಣೆ ಆಗಬೇಕೆಂದು ಬಯಸಿರುತ್ತಾರೆ.

6. ಈ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮನವಿಯ ಮೇರೆಗೆ ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿರುವ ಸಾಕ್ಷಿದಾರರಿಗೆ ಸಮನ್ಸ್ ಜಾರಿ ಮಾಡಲು ಆದೇಶಿಸಿರುತ್ತದೆ.

7. ಅಭಿಯೋಜನೆಯು ತನ್ನ ಪರವಾಗಿ ಒಟ್ಟು 7 ಜನ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಸದರಿ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ತನ್ನ ಪರವಾಗಿ ನಿಪಿ-1 ರಿಂದ 24 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತದೆ.

8. ಅಭಿಯೋಜನೆಯ ಪ್ರಕರಣದ ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ನಂತರ ಈ ನ್ಯಾಯಾಲಯವು ಆರೋಪಿತರ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಅಭಿಲೇಖಿಸಿರುತ್ತದೆ. ಆರೋಪಿತರಿಗೆ ಅಭಿಯೋಜನೆಯ ಪ್ರಕರಣದ ಸಾಕ್ಷಿದಾರರ ಸಾಕ್ಷ್ಯ ವಿಚಾರಣಾ ಸಾರಾಂಶವನ್ನು ಓದಿ ಹೇಳಲಾಗಿ ಆರೋಪಿತರು ಅದನ್ನು ನಿರಾಕರಿಸಿರುತ್ತಾರೆ. ಆರೋಪಿತರು ಮುಂದುವರೆದು ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಇರುವುದಿಲ್ಲವೆಂದು ಹಾಗೂ ತಾವು ಹೇಳುವುದು ಏನು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

9. ಈ ಪ್ರಕರಣವನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

**::ಅಂಶಗಳು ::**

**1. ದಿನಾಂಕಃ 16.06.2023 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಹಲಗೂರು ಪೊಲೀಸ್ ಠಾಣಾ ವ್ಯಾಪ್ತಿಯ ದಳವಾಯಿಕೋಡಿಹಳ್ಳಿ ಗ್ರಾಮದ ಬಸ್ ನಿಲ್ದಾಣದ ಸರ್ಕಲ್ ಬಳಿ ಇರುವ ತೇಜ ಮೆಡಿಕಲ್ ಸ್ಟೋರ್ ಮುಂದೆ ಹಾದು ಹೋಗಿರುವ ಕನಕಪುರ-ಮಳವಳ್ಳಿ ಎನ್‌ಹೆಚ್-209 ಹೆದ್ದಾರಿ ರಸ್ತೆಯನ್ನು ಪಾದಚಾರಿ ಮರಿಲಿಂಗಯ್ಯ ರವರು ಮನೆ ಕಡೆಗೆ ಹೋಗಲು ರಸ್ತೆಯನ್ನು ನಡೆದುಕೊಂಡು ದಾಟುತ್ತಿದ್ದಾಗ, 1 ನೇ ಆರೋಪಿಯು 2 ನೇ ಆರೋಪಿಯ ಬಾಬ್ತು ಕೆಎ-02-ಎಹೆಚ್-2209 ನಂಬರಿನ ಅಶೋಕ ಲೈಲ್ಯಾಂಡ್ ಮಿನಿ**

ಗೂಡ್ಸ್ ವಾಹನವನ್ನು ಕನಕಪುರ ಕಡೆಯಿಂದ ಮಳವಳ್ಳಿ ಕಡೆಗಾದಂತೆ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ದಾಟುತ್ತಿದ್ದ ಮರಿಲಿಂಗಯ್ಯ ರವರಿಗೆ ಡಿಕ್ಕಿ ಪಡಿಸಿ, ಅಪಘಾತ ಉಂಟು ಮಾಡಿರುತ್ತಾರೆ. ಆದ್ದರಿಂದ **1** ನೇ ಆರೋಪಿಯು ಭಾ.ದಂ.ಸಂ.ಕಲಂ**279** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?

**2.** ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, **1** ನೇ ಆರೋಪಿಯು ಕೆಎ-**02**-ಎಹೆಚ್-**2209** ನಂಬರಿನ ಅಶೋಕ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತ ಪಡಿಸಿದ ಪರಿಣಾಮವಾಗಿ ಮರಿಲಿಂಗಯ್ಯ ರವರಿಗೆ ತೀವ್ರ ಸ್ವರೂಪದ ಪೆಟ್ಟಾಗಿದ್ದು, ಚಿಕಿತ್ಸೆಗೆಂದು ಹಲಗೂರು ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿ ನಂತರ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿ ಮೃತರಾಗಿರುವ ಬಗ್ಗೆ ಅನುಮಾನ ಬಂದು ನಂತರ ವಾಪಸ್ ಮಂಡ್ಯ ಜಿಲ್ಲಾಸ್ಪತ್ರೆಗೆ ದಿನಾಂಕ **17.06.2023** ರಂದು ಬೆಳಗಿನ ಜಾವ **2.05** ಗಂಟೆ ಸಮಯದಲ್ಲಿ ಕರೆದುಕೊಂಡು ಬಂದು ವೈದ್ಯರ ಬಳಿ ತೋರಿಸಿದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ಆದ್ದರಿಂದ **1** ನೇ ಆರೋಪಿಯು ಭಾ.ದಂ.ಸಂ.ಕಲಂ. **304(ಎ)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?

**3.** ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, **1** ನೇ ಆರೋಪಿಯು ಕೆಎ-**02**-ಎಹೆಚ್-**2209** ನಂಬರಿನ ಅಶೋಕ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತ ಪಡಿಸಿ, ಗಾಯಾಳುವನ್ನು ಆಸ್ಪತ್ರೆಗೆ ದಾಖಲು ಮಾಡದೇ ಮತ್ತು ಅಪಘಾತದ ವಿಷಯವನ್ನು ಪೊಲೀಸರಿಗೆ ತಿಳಿಸದೇ ಸ್ಥಳದಿಂದ ಪರಾರಿಯಾಗಿರುತ್ತಾರೆ. ಆದಕಾರಣ **1** ನೇ ಆರೋಪಿಯು ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ **187** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?

**4.** ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, **1** ನೇ ಆರೋಪಿಯು ಕೆಎ-**02**-ಎಹೆಚ್-**2209** ನಂಬರಿನ ಅಶೋಕ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನವನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇಲ್ಲದಿದ್ದರೂ ಸಾರ್ವಜನಿಕ ಸ್ಥಳಗಳಲ್ಲಿ

**ಚಾಲನೆ ಮಾಡಿರುತ್ತಾರೆ. ಆದಕಾರಣ 1 ನೇ ಆರೋಪಿಯು ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 3 ಸಹವಾಚಕ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?**

**5. ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯು ತನ್ನ ಬಾಬ್ತು ಕೆಎ-02-ಎಹೆಚ್-2209 ನಂಬರಿನ ಅಶೋಕ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನವನ್ನು ಸಾರ್ವಜನಿಕ ಸ್ಥಳಗಳಲ್ಲಿ ಚಾಲನೆ ಮಾಡಲು ಚಾಲನಾ ಪರವಾನಿಗೆ ಇಲ್ಲದ 1 ನೇ ಆರೋಪಿಗೆ ನೀಡಿರುತ್ತಾರೆ. ಆದಕಾರಣ 2 ನೇ ಆರೋಪಿಯು ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 5 ಸಹವಾಚಕ 180 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?**

**6. ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯು ತನ್ನ ಬಾಬ್ತು ಕೆಎ-02-ಎಹೆಚ್-2209 ನಂಬರಿನ ಅಶೋಕ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನಕ್ಕೆ ವಿಮೆಯನ್ನು ಚಾಲ್ತಿಯಲ್ಲಿ ಇಟ್ಟಿರುವುದಿಲ್ಲ. ಆದಕಾರಣ 2 ನೇ ಆರೋಪಿಯು ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 146 ಸಹವಾಚಕ 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?**

**7. ಮಾಡುವ ಆದೇಶ ಏನು ?**

10. ಅಭಿಯೋಜನೆಯ ಪರ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದವನ್ನು ಆಲಿಸಲಾಯಿತು ಹಾಗೂ ಕಡತದಲ್ಲಿರುವ ದಾಖಲೆಗಳನ್ನು, ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಈ ನ್ಯಾಯಾಲಯವು ಕೂಲಂಕುಷವಾಗಿ ಪರಿಶೀಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶ ಸಂಖ್ಯೆ 1: ನಕರಾತ್ಮಕವಾಗಿ**
**ಅಂಶ ಸಂಖ್ಯೆ 2: ನಕರಾತ್ಮಕವಾಗಿ**
**ಅಂಶ ಸಂಖ್ಯೆ 3: ನಕರಾತ್ಮಕವಾಗಿ**

**ಅಂಶ ಸಂಖ್ಯೆ 4: ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ 5: ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ 6: ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ 7: ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ**

**::ಕಾರಣಗಳು::**

11. **ಅಂಶ ಸಂಖ್ಯೆ 1 ರಿಂದ 3** ಃ ಈ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ವಿಷಯಗಳು ಒಂದೇ ಆಗಿದ್ದು ಚರ್ಚೆಗಳು ಪುನಾರಾವರ್ತನೆ ಆಗುವುದನ್ನು ತಡೆಗಟ್ಟಲು ಈ ಮೂರು ಅಂಶಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

12. ಪೊಲೀಸರು 1 ನೇ ಆರೋಪಿಯ ವಿರುದ್ಧ **ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ), ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187** ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಈ ಪ್ರಾವಿಧಾನಗಳ ಬಗ್ಗೆ ನೋಡುವುದಾದರೆ.

> **ಭಾರತೀಯ ದಂಡ ಸಂಹಿತೆ ಕಲಂ.279-ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ವಾಹನ ನಡೆಸುವುದು ಅಥವಾ ಸವಾರಿ ಮಾಡುವುದುಃ-** ಮನುಷ್ಯನ ಪ್ರಾಣಕ್ಕೆ ಅಪಾಯವಾಗುವಂತೆ ಅಥವಾ ಯಾವನೇ ಇತರ ವ್ಯಕ್ತಿಗೆ ಗಾಯ ಅಥವಾ ತೊಂದರೆಯುಂಟುಮಾಡುವ ಹಾಗೆ ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾವನೇ ವ್ಯಕ್ತಿಯು ವಾಹನ ನಡೆಸಿದರೆ ಅಥವಾ ಸವಾರಿ ಮಾಡಿದರೆ ಅವನು ಆರು ತಿಂಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಲ್ಲಿ ದಂಡಿತನಾಗತಕ್ಕದ್ದು.

> **ಭಾರತೀಯ ದಂಡ ಸಂಹಿತೆ ಕಲಂ.304(ಎ)-ನಿರ್ಲಕ್ಷ್ಯತನದಿಂದ ಮರಣವುಂಟುಮಾಡುವುದುಃ-**ಯಾವನೇ ವ್ಯಕ್ತಿಯು ಅಪರಾಧ ಮಾಡವ ಹತ್ಯೆಯೆಂದು ಪರಿಗಣಿಸುವ ಯಾವುದೇ ದುಡುಕಿನ ಅಥವಾ ನಿರ್ಲಕ್ಷ್ಯದ

ಕೃತ್ಯವನ್ನು ಮಾಡಿ ಯಾವನೇ ವ್ಯಕ್ತಿಯು ಮರಣವುಂಟುಮಾಡಿದರೆ, ಅವನು ಎರಡು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಲ್ಲಿ ದಂಡಿತನಾಗತಕ್ಕದ್ದು.

**ಭಾರತೀಯ ಮೋಟಾರು ವಾಹನ ಕಾಯಿದೆ ಕಲಂ.187ಃ ಅಪಘಾತಕ್ಕೆ ಸಂಬಂಧಿಸಿದ ಅಪರಾಧಗಳಿಗೆ ಶಿಕ್ಷೆಃ-** ಉಪಬಂಧ(ಸಿ) ಯ ನಿಭಂಧನೆಗಳನ್ನು ಅನುಸರಿಸಲು ಯಾರು ವಿಫಲರಾಗುತ್ತಾರೆ, (1) ಕಲಂ.132 ಅಥವಾ 133 ಅಥವಾ ಕಲಂ.134 ರ ಅವಧಿಗೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಒಂದು ಅವಧಿಗೆ ಜೈಲು ಶಿಕ್ಷೆ ಅಥವಾ ಐದುನೂರು ಗಳವರೆಗೆ ದಂಡ ವಿಧಿಸಬಹುದು, ಅಥವಾ ಎರಡಕ್ಕೂ ಅಥವಾ ಹಿಂದೆ ಶಿಕ್ಷೆಗೆ ಒಳಗಾಗಿದ್ದು ಮತ್ತೆ ಅಪರಾಧಕ್ಕೆ ಶಿಕ್ಷೆಗೆ ಒಳಗಾಗುತ್ತಾರೆ.

13. **ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಕುಲದೀಪ್ ಸಿಂಗ್ ವಿರುದ್ಧ ರಾಜ್ಯದ ಪರವಾಗಿ ಹಿಮಾಚಲ ಪ್ರದೇಶ ರಾಜ್ಯ ((2008)14 ಎಸ್.ಸಿ.ಸಿ.795) ಪಕ್ರರಣದಲ್ಲಿ 9 ನೇ ಕಂಡಿಕೆಯಲ್ಲಿ ನಿರ್ಲಕ್ಷ್ಯತನದ ಬಗ್ಗೆ ಈ ಕೆಳಕಂಡಂತೆ ವಿವರಿಸಿರುತ್ತದೆ.**

"General principles of the law of negligence:- Negligence is a specific fort and many given circumstances is the failure to exercise that care which the circumstances demand, what **amounts** to negligence depends on the facts of each particular case. It may consist in omitting to do so noting which ought to be done or in doing something which ought to be done either in different manner or not at all. Where there is no duty to exercise care, negligence in the popular sense has no legal consequences, where there is a duty to exercise care, reasonable care must be taken to avoid acts or omissions which can be reasonably fore seen to be likely to cause physical injury to the persons or property. The

decree of care required in the particular care depends on the surrounding circumstances, and may very according to the **amount** of the risk to be encountered and the magnitude of the prospective injury. The duty of care is owed only to those persons who are in the area of foreseeable danger, the fact that the act of the defendant violated his duty of care to a third person does not enable to plaintiff who is also injured by the same act to claim unless he is also within the area of foreseeable danger. The same act or omission may accordingly in some circumstances involve liability as being negligent although in other circumstances it will not do so. The material considerations are the absence of care which is on the part of the defendant owed to the plaintiff in the circumstances of the care damage suffered by the plaintiff, together with the demonstrable relation of cause and effect between the two”.

14. ಈ ಮೇಲ್ಕಂಡಂತೆ ಚರ್ಚಿಸಿದ ಪ್ರಾವಿಧಾನಗಳ ಪ್ರಕಾರ ಮೋಟಾರು ಅಪಘಾತವು ವಾಹನದಿಂದ ಸಾರ್ವಜನಿಕ ರಸ್ತೆಯಲ್ಲಿ ಆಗಿರುತ್ತದೆ, 1 ನೇ ಆರೋಪಿಯು ಮಾನವನಿಗೆ ಅಪಾಯವಾಗುವ ರೀತಿಯಲ್ಲಿ ವಾಹನ ಚಾಲನೆ ಮಾಡಿರುತ್ತಾರೆಂದು, ಸದರಿ ಚಾಲನೆಯಿಂದ ಒಬ್ಬ ವ್ಯಕ್ತಿಯು ಮೃತಪಟ್ಟಿರುತ್ತಾರೆಂದು ಹಾಗೂ 1 ನೇ ಆರೋಪಿಯು ಅಪಘಾತವನ್ನು ಉಂಟು ಮಾಡಿ, ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೇ ಮತ್ತು ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿಯನ್ನು ನೀಡದೇ ಪರಾರಿಯಾಗಿರುತ್ತಾರೆಂದು ನಿಸ್ಸಂದೇಹವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯ ಮೇಲಿರುತ್ತದೆ.

15. ಅಭಿಯೋಜನೆಯು ಆರೋಪಿಗಳ ಮೇಲಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಲು ತನ್ನ ಪರವಾಗಿ 7 ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ಒಟ್ಟು ನಿಪಿ1 ರಿಂದ 24 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತದೆ.

16. ಅಭಿಯೋಜನೆಯ ಪರವಾಗಿ ವಿಚಾರಣೆಗೆ ಒಳಪಟ್ಟ ಸಾಕ್ಷಿದಾರರ ಸಾಕ್ಷ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಚಾಸಾ1 ಶ್ರೀ ಶಿವಪ್ಪ ರವರು ಅಭಿಯೋಜನೆಯ ಪ್ರಕಾರ ದೂರುದಾರರಾಗಿದ್ದು, ಇವರು ಅಭಿಯೋಜನೆ ಪರ ಪ್ರಾಸಾ1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಪರವಾಗಿ ನಿಪಿ1 ಎಂದು ದೂರನ್ನು, ನಿಪಿ1(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ2 ಎಂದು ಹೇಳಿಕೆಯನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ2 ಶ್ರೀ ರವಿಲಿಂಗು ರವರು ಅಭಿಯೋಜನೆಯ ಪ್ರಕಾರ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಪಂಚನಾಮೆಗೆ ಸಹಕರಿಸಿದ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆ ಪರ ಪ್ರಾಸಾ2 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಪರವಾಗಿ ನಿಪಿ3 ಎಂದು ಸ್ಥಳ ಪಂಚನಾಮೆಯನ್ನು, ನಿಪಿ3(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ4 ಎಂದು ಅಮಾನತ್ತು ಪಂಚನಾಮೆಯನ್ನು, ನಿಪಿ4(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ5 ರಿಂದ 8 ಎಂದು ಫೋಟೋಗಳನ್ನು, ನಿಪಿ9 ಎಂದು ಹೇಳಿಕೆಯನ್ನು ಗುರುತಿಸಿಕೊಂಡಿರುತ್ತಾರೆ.

17. ಚಾಸಾ3 ಶ್ರೀ ನಂಜುಂಡಸ್ವಾಮಿ ರವರು ಅಭಿಯೋಜನೆಯ ಪ್ರಕಾರ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆ ಪರ ಪ್ರಾಸಾ3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಪರವಾಗಿ ನಿಪಿ10 ಎಂದು ಹೇಳಿಕೆಯನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ4 ಶ್ರೀ ಶಿವಣ್ಣ ಮತ್ತು ಚಾಸಾ5 ಶ್ರೀ ಮಹದೇವೇಗೌಡ ರವರು ಅಭಿಯೋಜನೆಯ ಪ್ರಕಾರ ಸ್ಥಳ ಪಂಚನಾಮೆ ಹಾಗೂ

ಅಮಾನತ್ತು ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆ ಪರ ಕ್ರಮವಾಗಿ ಪ್ರಾಸಾ6 ಮತ್ತು 4 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತಮ್ಮ ಪರವಾಗಿ ನಿಪಿ3(ಡಿ) ಮತ್ತು 3(ಬಿ) ಎಂದು ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು, ನಿಪಿ4(ಡಿ) ಮತ್ತು 4(ಬಿ) ಎಂದು ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು, ನಿಪಿ11 ಮತ್ತು 22 ಎಂದು ಕ್ರಮವಾಗಿ ಹೇಳಿಕೆಗಳನ್ನು ಗುರುತಿಸಿಕೊಂಡಿರುತ್ತಾರೆ.

18. ಚಾಸಾ19 ಶ್ರೀ ಮಹೇಂದ್ರ.ಬಿ ರವರು ಪೊಲೀಸ್ ಅಧಿಕಾರಿಯಾಗಿದ್ದು, ಇವರು ದೂರು ಸ್ವೀಕರಿಸಿ ಪ್ರಕರಣ ದಾಖಲು ಮಾಡಿದ ಬಗ್ಗೆ ಸಾಕ್ಷ್ಯ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆಯ ಪರ ಪ್ರಾಸಾ7 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಪರವಾಗಿ ನಿಪಿ1(ಬಿ) ಎಂದು ದೂರಿನಲ್ಲಿರುವ ತನ್ನ ಸಹಿಯನ್ನು, ನಿಪಿ23 ಎಂದು ಪ್ರಥಮ ವರ್ತಮಾನ ವರದಿಯನ್ನು, ನಿಪಿ23(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ20 ಶ್ರೀ ಶ್ರೀಧರ್.ಬಿ.ಎಸ್ ರವರು ಪೊಲೀಸ್ ಅಧಿಕಾರಿಯಾಗಿದ್ದು, ಇವರು ತನಿಖೆ ಮುಂದುವರೆಸಿ ತನಿಖೆ ಪೂರೈಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆಯ ಪರ ಪ್ರಾಸಾ5 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಪರವಾಗಿ ನಿಪಿ3(ಸಿ) ಮತ್ತು 4(ಸಿ) ಎಂದು ಸ್ಥಳ ಪಂಚನಾಮೆ ಹಾಗೂ ಅಮಾನತ್ತು ಪಂಚನಾಮೆಗಳಲ್ಲಿರುವ ತನ್ನ ಸಹಿಗಳನ್ನು, ನಿಪಿ12 ಎಂದು ಕಚ್ಚಾ ನಕಾಶೆಯನ್ನು, ನಿಪಿ12(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ13 ಮತ್ತು 14 ಎಂದು ಕಲಂ.65 ಬಿ ಪ್ರಮಾಣಪತ್ರಗಳನ್ನು, ನಿಪಿ13(ಎ) ಮತ್ತು 14(ಎ) ಎಂದು ಅವುಗಳಲ್ಲಿರುವ ತನ್ನ ಸಹಿಗಳನ್ನು, ನಿಪಿ15 ಮತ್ತು 16 ಎಂದು ವೈದ್ಯರಿಗೆ ನೀಡಿದ ಮನವಿಗಳನ್ನು, ನಿಪಿ15(ಎ) ಮತ್ತು 16(ಎ) ಎಂದು ಅವುಗಳಲ್ಲಿರುವ ತನ್ನ ಸಹಿಗಳನ್ನು, ನಿಪಿ17 ಎಂದು ಎಂಎಲ್‌ಸಿ ಉತಾರವನ್ನು, ನಿಪಿ17(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ18 ಎಂದು ಪಿಎಂ

ವರದಿಯನ್ನು, ನಿಪಿ18(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ19 ಮತ್ತು 20 ಎಂದು ಕಲಂ 133 ರ ನೋಟೀಸ್ ಮತ್ತು ಪ್ರತ್ಯುತ್ತರವನ್ನು, ನಿಪಿ19(ಎ) ಮತ್ತು 20(ಎ) ಎಂದು ಅವುಗಳಲ್ಲಿರುವ ತನ್ನ ಸಹಿಗಳನ್ನು, ನಿಪಿ21 ಎಂದು ಐಎಂವಿ ವರದಿಯನ್ನು, ನಿಪಿ21(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿಕೊಂಡಿರುತ್ತಾರೆ.

19. ಅಭಿಯೋಜನೆಯ ಪರ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದವನ್ನು ಮಂಡಿಸುತ್ತಾ, ದಿನಾಂಕಃ 16.06.2023 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ 1 ನೇ ಆರೋಪಿಯು ಚಾಲನಾ ಪರವಾನಿಗೆ ಇಲ್ಲದೇ 2 ನೇ ಆರೋಪಿಯ ಬಾಬ್ತು ಗೂಡ್ಸ್ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ದಾಟುತ್ತಿದ್ದ ಮರಿಲಿಂಗಯ್ಯ ರವರಿಗೆ ಡಿಕ್ಕಿ ಪಡಿಸಿ ಅಪಘಾತ ಉಂಟುಮಾಡಿದ್ದು, ಇದರಿಂದ ಮರಿಲಿಂಗಯ್ಯ ರವರು ಮೃತರಾಗಿರುತ್ತದೆ. 1 ನೇ ಆರೋಪಿಯು ಅಪಘಾತದ ವಿಷಯವನ್ನು ಹತ್ತಿರದ ಪೊಲೀಸ್ ಠಾಣೆಗೆ ತಿಳಿಸದೇ ಮತ್ತು ಗಾಯಾಳುವಿಗೆ ಚಿಕಿತ್ಸೆ ಕೊಡಿಸದೇ ಸ್ಥಳದಿಂದ ಪರಾರಿಯಾಗಿರುತ್ತಾರೆ ಹಾಗೂ 2 ನೇ ಆರೋಪಿಯು ತನ್ನ ಬಾಬ್ತು ಗೂಡ್ಸ್ ವಾಹನಕ್ಕೆ ವಿಮೆಯನ್ನು ಚಾಲ್ತಿಯಲ್ಲಿಡದೆ ಚಾಲನೆ ಮಾಡಲು ಚಾಲನಾ ಪರವಾನಿಗೆ ಹೊಂದಿಲ್ಲದ 1 ನೇ ಆರೋಪಿಗೆ ನೀಡಿ ಅಪಘಾತಕ್ಕೆ ಕಾರಣರಾಗಿರುತ್ತಾರೆ. ಈ ಸಂಬಂಧವಾಗಿ ಅಭಿಯೋಜನೆಯ ಪರ ಎಲ್ಲಾ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನೆಯು ಆರೋಪಿತರ ಮೇಲಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಲು ಸಫಲವಾಗಿರುತ್ತದೆ. ಆದ್ದರಿಂದ ಆರೋಪಿತರನ್ನು ದೋಷಿಗಳೆಂದು ತೀರ್ಮಾನಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಕೋರಿರುತ್ತಾರೆ.

20. ಆರೋಪಿತರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, 1 ಮತ್ತು 2 ನೇ ಆರೋಪಿತರ ತಪ್ಪಿನಿಂದ ಅಪಘಾತ ಆಗದೇ ಇದ್ದರೂ ಸಹ ಅವರ

ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದು, ಅಭಿಯೋಜನೆಯ ಪರ ಪ್ರತ್ಯಕ್ಷ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಅಭಿಯೋಜನೆಯು ಆರೋಪಿತರ ಮೇಲಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತು ಪಡಿಸಲು ವಿಫಲವಾಗಿರುವುದರಿಂದ ಆರೋಪಿತರನ್ನು ನಿರ್ದೋಷಿಗಳೆಂದು ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

21. ಆರೋಪಿತರು ಅಪಘಾತವನ್ನು ಅಲ್ಲಗಳೆದಿರುವುದಿಲ್ಲ, ಕೇವಲ 1 ಮತ್ತು 2 ನೇ ಆರೋಪಿಯ ತಪ್ಪಿನಿಂದ ಅಪಘಾತ ಅಗಿರುವುದಿಲ್ಲ ಎಂಬ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಆದಕಾರಣ ಆರೋಪಿತರ ಸಮ್ಮತಿ ಮೇರೆಗೆ ಶವಪಂಚನಾಮೆ, ವಾಹನ ತಪಾಸಣಾ ವರದಿ, ಶವ ಪರೀಕ್ಷಾ ವರದಿ ಮತ್ತು ನಷ್ಟ ಭರ್ತಿ ಪತ್ರಗಳನ್ನು ನಿಶಾನೆಯಾಗಿ ಗುರುತಿಸಲಾಗಿದ್ದು, ಸದರಿ ದಾಖಲೆಗಳಿಗೆ ಸಂಬಂದಿಸಿದಂತೆ ತಮ್ಮ ತಕರಾರು ಇರುವುದಿಲ್ಲ ಎಂದು ಆರೋಪಿತರು ನುಡಿದಿರುತ್ತಾರೆ.

22. ಅಭಿಯೋಜನೆ ಪ್ರಕಾರ ಪ್ರಾಸಾ1 ರವರು ಕೇಳಿ ತಿಳಿದುಕೊಂಡ ಮತ್ತು ದೂರು ನೀಡಿದ ಬಗ್ಗೆ ಸಾಕ್ಷ್ಯ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ತನ್ನ ಸಾಕ್ಷ್ಯದಲ್ಲಿ ಮೃತ ಮರಿಲಿಂಗಯ್ಯ ರವರು ತನ್ನ ತಂದೆಯಾಗಿದ್ದು ತನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲವೆಂದು, ತಾನು ಅಪಘಾತದ ಬಗ್ಗೆ ಯಾರನ್ನೂ ಕೇಳಿ ತಿಳಿದುಕೊಂಡಿರುವುದಿಲ್ಲವೆಂದು, ತನ್ನ ತಂದೆಯು ಅಪಘಾತದಲ್ಲಿ ಮೃತರಾಗಿದ್ದು ಯಾವ ರೀತಿ ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ತನಗೆ ಗೊತ್ತಿರುವುದಿಲ್ಲವೆಂದು, ಪೊಲೀಸರ ಕೋರಿಕೆ ಮೇರೆಗೆ ನಿಪಿ1 ದೂರಿಗೆ ಸಹಿ ಮಾಡಿದ್ದು, ಅದರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿರುವುದಿಲ್ಲವೆಂದು ಮತ್ತು ಶವ ತನಿಖೆಯ ಸಂಬಂಧವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲವೆಂದು ನುಡಿದಿರುತ್ತಾರೆ.

23. ಪ್ರಾಸಾ2 ಮತ್ತು 3 ರವರು ಅಭಿಯೋಜನೆಯ ಪ್ರಕಾರ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅದೇ ರೀತಿ ಪ್ರಾಸಾ2 ರವರು ಅಭಿಯೋಜನೆಯ ಪ್ರಕಾರ ಮಹಜರ್ ಸಾಕ್ಷಿದಾರರಾಗಿದ್ದು, ಇವರುಗಳು ತಮ್ಮ ಸಾಕ್ಷ್ಯದಲ್ಲಿ ತಾವು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲವೆಂದು, ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲವೆಂದು, ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲವೆಂದು ಮತ್ತು ಆರೋಪಿಯನ್ನು ಈ ಹಿಂದೆ ನೋಡಿರುವುದಿಲ್ಲವೆಂದು ನುಡಿದಿರುತ್ತಾರೆ. ಅದೇ ರೀತಿ ಪ್ರಾಸಾ2 ರವರು ಮುಂದುವರೆದು ನಿಪಿ3 ಮತ್ತು 4 ದಾಖಲೆಗಳಿಗೆ ಪೊಲೀಸರ ಕೋರಿಕೆ ಮೇರೆಗೆ ಠಾಣೆಯಲ್ಲಿ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿರುವುದಿಲ್ಲವೆಂದು, ತನ್ನ ಸಮಕ್ಷಮ ಪೊಲೀಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲವೆಂದು ನುಡಿದಿರುತ್ತಾರೆ. ಪ್ರಾಸಾ1 ರಿಂದ 3 ರವರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟಿ ಸವಾಲು ಮಾಡಿದ್ದು ಆದರೂ ಸಹ ಈ ಸಾಕ್ಷಿದಾರರಿಂದ ಯಾವುದೇ ಉಪಯುಕ್ತ ಮಾಹಿತಿಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಇವರ ಸಾಕ್ಷ್ಯದಿಂದ ಅಭಿಯೋಜನೆಯ ಪ್ರಕರಣಕ್ಕೆ ತೀವ್ರ ಹಿನ್ನಡೆಯಾಗಿರುತ್ತದೆ.

24. ಪ್ರಾಸಾ4 ಮತ್ತು 6 ರವರು ಅಭಿಯೋಜನೆಯ ಪ್ರಕಾರ ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನಿಪಿ3 ಮತ್ತು 4 ದಾಖಲೆಗಳಿಗೆ ಪೊಲೀಸರ ಕೋರಿಕೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ತಮಗೆ ಗೊತ್ತಿರುವುದಿಲ್ಲವೆಂದು ಮತ್ತು ತಮ್ಮ ಸಮಕ್ಷಮ ಪೊಲೀಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲವೆಂದು, ಫೋಟೋಗಳನ್ನು ಯಾವ ಉದ್ದೇಶಕ್ಕೆ ತೆಗೆಸಿರುತ್ತಾರೆಂದು ತಮಗೆ ಗೊತ್ತಿರುವುದಿಲ್ಲವೆಂದು ಮತ್ತು ಪೊಲೀಸರ

ಮುಂದೆ ಹೇಳಿಕೆ ನೀಡಿರುವುದಿಲ್ಲವೆಂದು ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟಿ ಸವಾಲು ಮಾಡಿದ್ದು ಆದರೂ ಸಹ ಈ ಸಾಕ್ಷಿದಾರರಿಂದ ಯಾವುದೇ ಉಪಯುಕ್ತ ಮಾಹಿತಿಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ, ಅಭಿಯೋಜನೆಯು ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಯನ್ನು ನಿಸ್ಸಂದೇಹವಾಗಿ ರುಜುವಾತು ಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ.

25. ಪ್ರಾಸಾ5 ಮತ್ತು 7 ರವರು ತನಿಖಾಧಿಕಾರಿಗಳಾಗಿದ್ದು ತಾವು ಮಾಡಿದ ತನಿಖೆಗೆ ಸಂಬಂಧವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಆರೋಪಿತರ ಪರ ವಕೀಲರು ಪಾಟಿ ಸವಾಲು ಮಾಡಿರುತ್ತಾರೆ. ಈ ಮೇಲ್ಕಂಡಂತೆ ಚರ್ಚಿಸಿದ ಪ್ರಕಾರ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರು ಎಂದು ಹೇಳುವ ಮತ್ತು ಸ್ಥಳ ಪಂಚನಾಮೆ ಸಾಕ್ಷಿದಾರರು ಎಂದು ಹೇಳುವ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಬಹುಮುಖ್ಯವಾದ ಸಾಕ್ಷಿದಾರರೇ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಆದ್ದರಿಂದ, 1 ನೇ ಆರೋಪಿಯ ದುಡುಕುತನ ಅಥವಾ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ ಎಂದು ಮತ್ತು 1 ನೇ ಆರೋಪಿಯು ಅಪಘಾತಪಡಿಸಿ ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೇ ಮತ್ತು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿಯನ್ನು ನೀಡದೇ ಪರಾರಿಯಾಗಿರುತ್ತಾರೆಂದು ಎಂಬುದನ್ನು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಟ್ಟಿರುತ್ತದೆ. ಈ ಎಲ್ಲಾ ಕಾರಣಗಳಿಂದ ಈ ನ್ಯಾಯಾಲಯವು **ಅಂಶ ಸಂಖ್ಯೆ 1 ರಿಂದ 3 ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

26. **<u>ಅಂಶ ಸಂಖ್ಯೆ 4 ರಿಂದ 6:</u>** ಈ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ವಿಷಯಗಳು ಒಂದೇ ಆಗಿದ್ದು ಚರ್ಚೆಗಳು ಪುನಾರಾವರ್ತನೆ ಆಗುವುದನ್ನು ತಡೆಗಟ್ಟಲು ಈ ಮೂರು ಅಂಶಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

27. ಪೊಲೀಸರು 1 ಮತ್ತು 2ನೇ ಆರೋಪಿತರ ವಿರುದ್ದ **ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 3 ಸಹವಾಚಕ 181, 5 ಸಹವಾಚಕ 180 ಮತ್ತು 146 ಸಹವಾಚಕ 196** ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಈ ಪ್ರಾವಿಧಾನಗಳ ಬಗ್ಗೆ ನೋಡುವುದಾದರೆ.

> **<u>Section 181 of IMV Act:</u>** Driving vehicles in contravention of section 3 or section 4. - Whoever drives a motor vehicle in contravention of section 3 or section 4 shall be punishable with imprisonment for a term which may extend to three months, or with fine [of five thousand rupees], or with both.

> **<u>Section 180 of IMV Act:</u>** Allowing unauthorised persons to drive vehicles. - Whoever, being the owner or person in charge of a motor vehicle, causes or permits, any other person who does not satisfy the provisions of section 3 or section 4 to drive the vehicle shall be punishable with imprisonment for a term which may extend to three months, or with fine [of five thousand rupees], or with both.

> <u>ಭಾರತೀಯ ಮೋಟಾರು ವಾಹನ ಕಾಯಿದೆ ಕಲಂ**.196**ಃ**-**</u>The person found guilty of driving an uninsured vehicle can be punished with imprisonment of up to three months and/or penalty of ₹2000. A subsequent offence can lead to stricter punishment of imprisonment for 3 months or ₹4000 fine or both.

28. 1 ನೇ ಆರೋಪಿಯು ಅಪಘಾತದ ಕಾಲಕ್ಕೆ ವಾಹನವನ್ನು ಚಾಲನೆ ಮಾಡಲು ಪರವಾನಿಗೆಯನ್ನು ಹೊಂದಿರಲಿಲ್ಲವೆಂದು ಹಾಗೂ 2 ನೇ ಆರೋಪಿಯು ಚಾಲನಾ ಪರವಾನಿಗೆ ಇಲ್ಲದ 1 ನೇ ಆರೋಪಿಗೆ ತನ್ನ ಬಾಬ್ತು ಇನ್ಶೂರೆನ್ಸ್ ಇಲ್ಲದ ಗೂಡ್ಸ್ ವಾಹನವನ್ನು ಚಾಲನೆ ಮಾಡಲು ನೀಡಿರುತ್ತಾರೆಂದು ಅಭಿಯೋಜನೆಯು ಅಪಾಧಿಸಿರುತ್ತದೆ. ಸದರಿ ಆಪಾಧನೆಗೆ ಸಂಬಂಧವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು 1 ಮತ್ತು 2 ನೇ ಆರೋಪಿತರ ಮೇಲಿರುತ್ತದೆ. ಸದರಿ ಸಂಗತಿಯನ್ನು ರುಜುವಾತುಪಡಿಸಲು 1 ಮತ್ತು 2 ನೇ ಆರೋಪಿತರು ಚಾಲನಾ ಪರವಾನಿಗೆಯನ್ನು ಹಾಗೂ ಚಾಲ್ತಿಯಲ್ಲಿರುವ ವಿಮೆ ಪಾಲಿಸಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿರುತ್ತದೆ. ಅಪಘಾತದ ಕಾಲಕ್ಕೆ 1 ನೇ ಆರೋಪಿಯು ಕೆಎ-02-ಎಹೆಚ್-2209 ನಂಬರಿನ ಅಶೋಕ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನವನ್ನು ಚಾಲನೆ ಮಾಡಿರುತ್ತಾರೆ ಹಾಗೂ 2 ನೇ ಆರೋಪಿಯು ಸದರಿ ವಾಹನದ ಮಾಲೀಕರು ಎಂಬ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. 1 ನೇ ಆರೋಪಿಗೆ ವಾಹವನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇತ್ತು ಎಂದು ರುಜುವಾತು ಪಡಿಸಲು ಚಾಲನಾ ಪರವಾನಿಗೆಯ ಪ್ರತಿಯನ್ನು ಹಾಗೂ ಸದರಿ ವಾಹನಕ್ಕೆ ವಿಮೆ ಚಾಲ್ತಿಯಲ್ಲಿತ್ತು ಎಂದು ರುಜುವಾತು ಪಡಿಸಲು ವಿಮೆ ಪಾಲಿಸಿಯ ಪ್ರತಿಯನ್ನು 1 ಮತ್ತು 2 ನೇ ಆರೋಪಿತರು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, 1 ನೇ ಆರೋಪಿಯು ಅಪಘಾತದ ಕಾಲಕ್ಕೆ ತಾನು ವಾಹನವನ್ನು ಚಾಲನೆ ಮಾಡಲು ಪರವಾನಿಗೆ ಹೊಂದಿದ್ದೆ ಎಂದು ಹಾಗೂ 2 ನೇ ಆರೋಪಿಯು ಅಪಘಾತದ ಕಾಲಕ್ಕೆ ತನ್ನ ಬಾಬ್ತು ಗೂಡ್ಸ್ ವಾಹನಕ್ಕೆ ವಿಮೆ ಇತ್ತು ಎಂದು ರುಜುವಾತುಪಡಿಸಲು ವಿಫಲವಾಗಿರುತ್ತಾರೆ. ಆದಕಾರಣ, ಈ ನ್ಯಾಯಾಲಯವು ಅಪಘಾತ ಕಾಲಕ್ಕೆ 1 ನೇ ಆರೋಪಿಗೆ ವಾಹನವನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇರಲಿಲ್ಲ ಎಂದು ಮತ್ತು ಚಾಲನಾ ಪರವಾನಿಗೆ ಇಲ್ಲದ 1 ನೇ ಆರೋಪಿಗೆ 2 ನೇ ಆರೋಪಿಯು ತನ್ನ ಬಾಬ್ತು ವಿಮೆ ಇಲ್ಲದ ಗೂಡ್ಸ್ ವಾಹವನ್ನು ಚಾಲನೆ ಮಾಡಲು ನೀಡಿರುತ್ತಾರೆಂದು ಅಭಿಪ್ರಾಯಪಟ್ಟು **ಅಂಶ ಸಂಖ್ಯೆ 4 ರಿಂದ 6 ಅನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.**

29. <u>**ಅಂಶ ಸಂಖ್ಯೆ 7**</u> ಃ ಈ ಮೇಲಿನ 1 ರಿಂದ 6 ನೇ ಅಂಶಗಳಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಃಃ ಆದೇಶ ಃಃ**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಂತೆ ಇರುವ ಅಧಿಕಾರವನ್ನು ಚಲಾಯಿಸಿ 1 ನೇ ಆರೋಪಿಯ ಮೇಲಿರುವ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ) ಹಾಗೂ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187 ರಂತೆ ಇರುವ ಆರೋಪಗಳಿಂದ ದೋಷ ಮುಕ್ತಗೊಳಿಸಲಾಗಿದೆ.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಂತೆ ಇರುವ ಅಧಿಕಾರವನ್ನು ಚಲಾಯಿಸಿ 1 ನೇ ಆರೋಪಿಯ ಮೇಲಿರುವ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 3 ಸಹವಾಚಕ ಕಲಂ 181 ರಂತೆ ಇರುವ ಆರೋಪಗಳಿಂದ ಅಪರಾಧಿ ಎಂದು ತೀರ್ಮಾನಿಸಲಾಗಿದೆ.**

**1 ನೇ ಆರೋಪಿಗೆ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 3 ಸಹವಾಚಕ ಕಲಂ 181 ರಂತೆ ಇರುವ ಅಪರಾಧಕ್ಕಾಗಿ ರೂ.2,000/- ದಂಡ ವಿಧಿಸಲಾಗಿದೆ. ಸದರಿ ದಂಡದ ಮೊತ್ತವನ್ನು 1 ನೇ ಆರೋಪಿಯು ಪಾವತಿಸಲು ವಿಫಲವಾದಲ್ಲಿ ಅವರಿಗೆ 10 ದಿನಗಳ ಸಾಧಾರಣ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಗಿದೆ.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಂತೆ ಇರುವ ಅಧಿಕಾರವನ್ನು ಚಲಾಯಿಸಿ 2 ನೇ ಆರೋಪಿಯ ಮೇಲಿರುವ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 5 ಸಹವಾಚಕ ಕಲಂ 180 ಮತ್ತು ಕಲಂ 146 ಸಹವಾಚಕ ಕಲಂ 196 ರಂತೆ ಇರುವ ಆರೋಪಗಳಿಂದ ಅಪರಾಧಿ ಎಂದು ತೀರ್ಮಾನಿಸಲಾಗಿದೆ.**

2 ನೇ ಆರೋಪಿಗೆ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 5 ಸಹವಾಚಕ ಕಲಂ 180 ರಂತೆ ಇರುವ ಅಪರಾಧಕ್ಕಾಗಿ ರೂ.2,000/- ದಂಡ ವಿಧಿಸಲಾಗಿದೆ. ಸದರಿ ದಂಡದ ಮೊತ್ತವನ್ನು 2 ನೇ ಆರೋಪಿಯು ಪಾವತಿಸಲು ವಿಫಲವಾದಲ್ಲಿ ಅವರಿಗೆ 10 ದಿನಗಳ ಸಾಧಾರಣ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಗಿದೆ.

2 ನೇ ಆರೋಪಿಗೆ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 146 ಸಹವಾಚಕ ಕಲಂ 196 ರಂತೆ ಇರುವ ಅಪರಾಧಕ್ಕಾಗಿ ರೂ.3,000/- ದಂಡ ವಿಧಿಸಲಾಗಿದೆ. ಸದರಿ ದಂಡದ ಮೊತ್ತವನ್ನು 2 ನೇ ಆರೋಪಿಯು ಪಾವತಿಸಲು ವಿಫಲವಾದಲ್ಲಿ ಅವರಿಗೆ 15 ದಿನಗಳ ಸಾಧಾರಣ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಗಿದೆ.

ಆರೋಪಿತರು ಮತ್ತು ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆಯು ಈ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ.

ಈ ಪ್ರಕರಣದಲ್ಲಿ ವಾಹನವನ್ನು ಈಗಾಗಲೇ ಅದರ ಮಾಲೀಕರು ಪೊಲೀಸ್ ಠಾಣೆಯ ಮೂಲಕ ಬಿಡಿಸಿಕೊಂಡಿದ್ದು ಮೇಲ್ಮನವಿ ಅವಧಿ ಮುಗಿದ ನಂತರ ಸದರಿ ವಾಹನದ ಮಾಲೀಕರಿಗೆ ಸಂಪೂರ್ಣವಾದದ್ದಾಗಿರುತ್ತದೆ.

ತೀರ್ಪಿನ ದೃಢೀಕೃತ ಪ್ರತಿಯನ್ನು ತಕ್ಷಣ 1 ಮತ್ತು 2 ನೇ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 363 ರ ಪ್ರಕಾರ ನೀಡಲು ಕಛೇರಿಗೆ ಸೂಚಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, 2026 ನೇ ಇಸವಿ ಆಗಸ್ಟ್ 10 ನೇ ದಿನಾಂಕದಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಮಹೇಂದ್ರ ಎಂ.)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಮಳವಳ್ಳಿ**

## ಃಃಅನುಬಂಧಃಃ

**ಅಭಿಯೋಜನೆಯ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ**

ಪ್ರಾಸಾ-1 ಃ ಶ್ರೀ ಶಿವಪ್ಪ
ಪ್ರಾಸಾ-2 ಃ ಶ್ರೀ ರವಿಲಿಂಗು
ಪ್ರಾಸಾ-3 ಃ ಶ್ರೀ ನಂಜುಂಡಸ್ವಾಮಿ
ಪ್ರಾಸಾ-4 ಃ ಶ್ರೀ ಮಹದೇವೇಗೌಡ
ಪ್ರಾಸಾ-5 ಃ ಶ್ರೀ ಶ್ರೀಧರ್.ಬಿ.ಎಸ್
ಪ್ರಾಸಾ-6 ಃ ಶ್ರೀ ಶಿವಣ್ಣ
ಪ್ರಾಸಾ-7 ಃ ಶ್ರೀ ಮಹೇಂದ್ರ.ಬಿ

**ಆರೋಪಿತರ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ**

-ಇಲ್ಲ-

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

ನಿಪಿ.1 ಃ ದೂರು
ನಿಪಿ.1(ಎ) ಃ ಪ್ರಾಸಾ1 ರವರ ಸಹಿ
ನಿಪಿ.1(ಬಿ) ಃ ಪ್ರಾಸಾ5 ರವರ ಸಹಿ
ನಿಪಿ.2 ಃ ಪ್ರಾಸಾ1 ರವರ ಹೇಳಿಕೆ
ನಿಪಿ.3 ಃ ಸ್ಥಳ ಪಂಚನಾಮೆ
ನಿಪಿ.3(ಎ) ಃ ಪ್ರಾಸಾ2 ರವರ ಸಹಿ
ನಿಪಿ.3(ಬಿ) ಃ ಪ್ರಾಸಾ4 ರವರ ಸಹಿ
ನಿಪಿ.3(ಸಿ) ಃ ಪ್ರಾಸಾ5 ರವರ ಸಹಿ
ನಿಪಿ.3(ಡಿ) ಃ ಪ್ರಾಸಾ6 ರವರ ಸಹಿ
ನಿಪಿ.4 ಃ ಅಮಾನತ್ತು ಪಂಚನಾಮೆ
ನಿಪಿ.4(ಎ) ಃ ಪ್ರಾಸಾ2 ರವರ ಸಹಿ
ನಿಪಿ.4(ಬಿ) ಃ ಪ್ರಾಸಾ4 ರವರ ಸಹಿ
ನಿಪಿ.4(ಸಿ) ಃ ಪ್ರಾಸಾ5 ರವರ ಸಹಿ
ನಿಪಿ.4(ಡಿ) ಃ ಪ್ರಾಸಾ6 ರವರ ಸಹಿ
ನಿಪಿ.5 ರಿಂದ 8 ಃ ಫೋಟೋಗಳು

| | | |
|---|---|---|
| ನಿಪಿ.9 | ಃ | ಪ್ರಾಸಾ2 ರವರ ಹೇಳಿಕೆ |
| ನಿಪಿ.10 | ಃ | ಪ್ರಾಸಾ3 ರವರ ಹೇಳಿಕೆ |
| ನಿಪಿ.11 | ಃ | ಪ್ರಾಸಾ4 ರವರ ಹೇಳಿಕೆ |
| ನಿಪಿ.12 | ಃ | ಕಚ್ಚಾ ನಕಾಶೆ |
| ನಿಪಿ.12(ಎ) | ಃ | ಪ್ರಾಸಾ5 ರವರ ಸಹಿ |
| ನಿಪಿ.13 & 14 | ಃ | ಕಲಂ 65 ಬಿ ಪ್ರಮಾಣಪತ್ರಗಳು |
| ನಿಪಿ.13(ಎ)&14(ಎ) | ಃ | ಪ್ರಾಸಾ5 ರವರ ಸಹಿ |
| ನಿಪಿ.15 & 16 | ಃ | ಮನವಿ ಪತ್ರಗಳು |
| ನಿಪಿ.15(ಎ)&16(ಎ) | ಃ | ಪ್ರಾಸಾ5 ರವರ ಸಹಿ |
| ನಿಪಿ.17 | ಃ | ಎಂಎಲ್‌ಸಿ ಉತಾರ |
| ನಿಪಿ.17(ಎ) | ಃ | ಪ್ರಾಸಾ5 ರವರ ಸಹಿ |
| ನಿಪಿ.18 | ಃ | ಪಿಎಂ ವರದಿ |
| ನಿಪಿ.18(ಎ) | ಃ | ಪ್ರಾಸಾ5 ರವರ ಸಹಿ |
| ನಿಪಿ.19 & 20 | ಃ | ಕಲಂ 133 ನೋಟೀಸ್ ಮತ್ತು ಪ್ರತ್ಯುತ್ತರ |
| ನಿಪಿ.19(ಎ)&20(ಎ) | ಃ | ಪ್ರಾಸಾ5 ರವರ ಸಹಿ |
| ನಿಪಿ.21 | ಃ | ಐಎಂವಿ ವರದಿ |
| ನಿಪಿ.21 | ಃ | ಪ್ರಾಸಾ5 ರವರ ಸಹಿ |
| ನಿಪಿ.22 | ಃ | ಪ್ರಾಸಾ6 ರವರ ಹೇಳಿಕ |
| ನಿಪಿ.23 | ಃ | ಪ್ರಥಮ ವರ್ತಮಾನ ವರದಿ |
| ನಿಪಿ.23(ಎ) | ಃ | ಪ್ರಾಸಾ7 ರವರ ಸಹಿ |
| ನಿಪಿ.24 | ಃ | ಶವ ತನಿಖಾ ವರದಿ |

**ಆರೋಪಿತರ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

-ಇಲ್ಲ-

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳುಃ**

-ಇಲ್ಲ-

**(ಮಹೇಂದ್ರ ಎಂ.)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಮಳವಳ್ಳಿ.**